DTE-CDC0LRDC/15/2023-JD CDC-DEPT TECH EDUCATION

4496/2024

ಕರ್ನಾಟಕ ಸರ್ಕಾರ
(ತಾಂತ್ರಿಕ ಶಿಕ್ಷಣ ಇಲಾಖೆ)

ಸಂಖ್ಯೆ: ಡಿಟಿಇ 13 ಎಲ್‌ಆರ್‌ಡಿಸಿ 2023 (E-1248319)

ಆಯುಕ್ತರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಅರಮನೆ ರಸ್ತೆ, ಬೆಂಗಳೂರು
ದಿನಾಂಕ:25/11/2024

## ಸುತ್ತೋಲೆ

ವಿಷಯ: 2024-25 ನೇ ಸಾಲಿನ "45 ನೇ ರಾಜ್ಯ ಮಟ್ಟದ ಅಂತರ ಪಾಲಿಟೆಕ್ನಿಕ್ ಕ್ರೀಡಾಕೂಟ" ದ "ROLLING TROPHY" ಗಳನ್ನು ಹಿಂದಿರುಗಿಸುವ ಬಗ್ಗೆ.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ 2024-25ನೇ ಸಾಲಿನ "45ನೇ ರಾಜ್ಯ ಮಟ್ಟದ ಅಂತರ ಪಾಲಿಟೆಕ್ನಿಕ್, ಕ್ರೀಡಾಕೂಟ"ವನ್ನು ಜನವರಿ 2025ರ ಮಾಹೆಯಲ್ಲಿ ತಾಂತ್ರಿಕ ಶಿಕ್ಷಣ ಇಲಾಖೆಯ ಸಹಯೋಗದಲ್ಲಿ ಕರ್ನಾಟಕ (ಸರ್ಕಾರಿ) ಪಾಲಿಟೆಕ್ನಿಕ್, ಮಂಗಳೂರು, ಸಂಸ್ಥೆಯಲ್ಲಿ ಆಯೋಜಿಸಲಾಗುವ ಹಿನ್ನೆಲೆಯಲ್ಲಿ, 2023-24ನೇ ಸಾಲಿನಲ್ಲಿ ಪಡೆದಿದ್ದ ROLLING TROPHYಗಳನ್ನು ದಿನಾಂಕ: 14-12-2024 ರೊಳಗಾಗಿ ಪ್ರಾಂಶುಪಾಲರು, ಕರ್ನಾಟಕ (ಸರ್ಕಾರಿ) ಪಾಲಿಟೆಕ್ನಿಕ್, ಮಂಗಳೂರು ಇವರಿಗೆ ತಲುಪಿಸಬೇಕಾಗಿರುತ್ತದೆ.

ಮುಂದುವರೆದು, ಸತತವಾಗಿ ಮೂರು ಭಾರಿ ವಿಜೇತರಾದ ಕ್ರೀಡಾಪಟು/ತಂಡದ ಸಂಸ್ಥೆಯವರು ಆಯುಕ್ತಾಲಯಕ್ಕೆ ಮಾಹಿತಿ ನೀಡಿ, ಅನುಮತಿ ಪತ್ರ ಪಡೆದಿದ್ದಲ್ಲಿ ಮಾತ್ರ, ROLLING TROPHYಯನ್ನು ಶಾಶ್ವತವಾಗಿ ಸಂಸ್ಥೆಯಲ್ಲಿ ಉಳಿಸಿಕೊಳ್ಳಲು ಅವಕಾಶವಿರುತ್ತದೆ. ಆಯುಕ್ತಾಲಯದ ಅನುಮತಿ ಪಡೆದು TROPHYಯನ್ನು ಸಂಸ್ಥೆಯಲ್ಲಿಯೇ ಉಳಿಸಿಕೊಂಡಿದ್ದಲ್ಲಿ, ದಿನಾಂಕ: 10/12/2024ರೊಳಗೆ ಮಾಹಿತಿಯನ್ನು ತಪ್ಪದೆ ಆಯುಕ್ತಾಲಯಕ್ಕೆ ನೀಡುವಂತೆ ಈ ಮೂಲಕ ಸೂಚಿಸಲಾಗಿದೆ.

ತಮ್ಮ ವಿಶ್ವಾಸಿ,

ಜಂಟಿ ನಿರ್ದೇಶಕರು(ಸಿಡಿಸಿ)

ಇವರುಗಳಿಗೆ :

1. ರಾಜ್ಯದ ಎಲ್ಲಾ ಪಾಲಿಟೆಕ್ನಿಕ್ (ಸರ್ಕಾರಿ/ಅನುದಾನಿತ/ಖಾಸಗಿ) ಪ್ರಾಂಶುಪಾಲರ ಗಮನಕ್ಕೆ– ಸೂಕ್ತ ಕ್ರಮಕ್ಕಾಗಿ
2. ಇ-ಗವರ್ನೆನ್ಸ್ ವಿಭಾಗಕ್ಕೆ– ಇಲಾಖೆಯ ಅಂತರ್ಜಾಲದಲ್ಲಿ ಪ್ರಚುರ ಪಡಿಸಲು

ಪ್ರತಿ: ಎಲ್‌ಆರ್‌ಡಿಸಿ ಕಡತಕ್ಕೆ

ರವಾನಿಸಲಾಗಿದೆ
ಸಂ: 1447
ದಿ: 30-11-2024
ಸಹಿ: